ಕ್ರಮ ಸಂಖ್ಯೆ ಎ.ಎಚ್. ೧೨೧ ವಿ.ಎ.ಎಚ್. ೮೧, ದಿನಾಂಕ ೨೭ನೇ ಡಿಸೆಂಬರ್ ೧೯೮೫ರಲ್ಲಿ ಗ್ರಾಮೀಣ ಪಶುವೈದ್ಯಶಾಲೆಯನ್ನು ಮಂಜೂರು ಮಾಡಲಾಯಿತು. ಆದರೆ ಸಿಬ್ಬಂದಿ ಪ್ರತ್ಯೇಕ ಹಣಕಾಸಿನ ಕೊರತೆಯಿಂದ ಈ ಗ್ರಾಮದಲ್ಲಿ ಪಶುವೈದ್ಯಶಾಲೆಯನ್ನು ಪ್ರಾರಂಭ ಮಾಡಲಾಗಲಿಲ್ಲ.

ಈ ವರ್ಷದಲ್ಲಿ ಸಿಬ್ಬಂದಿ ಕೊರತೆ ಸ್ವಲ್ಪಮಟ್ಟಿಗೆ ನೀಗಿರುವುದರಿಂದಲೂ ಮತ್ತು ಸರ್ಕಾರ ಹೊಸದಾಗಿ ಗ್ರಾಮೀಣ ಪಶುವೈದ್ಯಶಾಲೆಗಳನ್ನು ಮಂಜೂರು ಮಾಡುವ ಉದ್ದೇಶ ಹೊಂದಿರುವ ದೃಷ್ಟಿಯಿಂದ ಸದರಿ ಗ್ರಾಮೀಣ ಪಶುವೈದ್ಯಶಾಲೆಯನ್ನು ಮಂಜೂರು ಮಾಡಲು ಪರಿಶೀಲಿಸ ಲಾಗುವುದು.

ಮಾನ್ಯ ಸದಸ್ಯರು ಹೇಳಿದಂತೆ ಕಟ್ಟಡವು ಸಹ ೧೯೮೫ರಲ್ಲಿ ಪೂರ್ಣಗೊಂಡಿದ್ದು ಇದರ ಮಂಜೂ ರಾತಿ ಆದನಂತರ ಪಶುವೈದ್ಯಶಾಲೆಯನ್ನು ನಡೆಸಲು ಪರಿಶೀಲಿಸಲಾಗುವುದು.

VII ನಿವೃತ್ತ ಸೇನಾಧಿಕಾರಿ ಕರ್ನಲ್ ಮಥಾಯ್‌ಅವರನ್ನು ಪೋಲೀಸರು ತಿಳುವಳಿಕೆಯಿಲ್ಲದೆ ಶಿಕ್ಷಿಸಿರುವುದು

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಬೆಂಗಳೂರಿನ ಲ್ಯಾಂಗ್‌ಫರ್ಡ್ ಗಾರ್ಡನ್ಸ್ ನಿವಾಸಿ ನಿವೃತ್ತ ಸೇನಾಧಿಕಾರಿ ಕರ್ನಲ್ ಮೆಥಾಯ್ (ಥಾಮಸ್) ರವರನ್ನು ಪೋಲೀಸಿನವರು ಅಪಹರಿಸಿ ಕಲಾಸಿಪಾಳ್ಯಂ ಪೋಲೀಸ್ ಠಾಣೆಗೆ ಕೊಂಡೊಯ್ದು ಅವರನ್ನು ಬೈದು, ಥಳಿಸಿ ಹಿಂಸೆಗೆ ಗುರಿಪಡಿಸಿ ರುವುದು ಇಂಡಿಯನ್ ಎಕ್ಸ್‌ಪ್ರೆಸ್ ೧೮-೮-೧೯೮೬ರಲ್ಲಿ ವರದಿಯಾಗಿದೆ ಪೋಲೀಸ್ ಅಧಿಕಾರಿಗಳನ್ನು ಕೇಳಿದಾಗ, ತಿಳುವಳಿಕೆಯಿಲ್ಲದೆ ಮಾಡಿದ ಕಾರ್ಯ ಎಂದು ಹೇಳಲಾಗಿದೆ.

ಆಂತೆಯೇ ಆಗಸ್ಟ್ ೬ರಂದು ಸಂಜೆ ನಂತರ ಮೂರು ಜನ ಬನಶಂಕರಿಯಲ್ಲಿ ವಾಸಿಸುವ ಶ್ರೀಮತಿ ಕಾಂತಾಮಣಿಯವರ ಮನೆಗೆ ನುಗ್ಗಿ ಅವರನ್ನು ಕಿವಿಯೋಲೆ ಕೊಡಬೇಕೆಂದು ಕೇಳಿ, ಅತ್ಯಾಚಾರವೆಸಗುವುದಾಗಿ ಬೆದರಿಕೆ ಹಾಕಿದ್ದಾಗ ವರದಿಯಾಗಿದೆ. ಆಲ್ಲದೆ ಅವರನ್ನು ಬಲಾತ್ಕಾರವಾಗಿ ಪೋಲೀಸ್ ಠಾಣೆಗೆ ಕರೆದೊಯ್ದು ಪೋಲೀಸಿನವರು ಹೊಡೆದಿದ್ದಾಗಿ ಮತ್ತು ಅಕ್ರಮ ಬಂಧನದಲ್ಲಿ ಟ್ಟಿದ್ದಾಗಿ ವರದಿಯಾಗಿದೆ. ಆಲ್ಲದೆ ಸಾವಿರ ರೂಪಾಯಿಗಳ ಲಂಚವನ್ನು ಕೇಳಿದರೆಂದು ತಿಳಿದುಬಂದಿದೆ.

ಈ ಎರಡೂ ನಿದರ್ಶನಗಳು ಪೋಲೀಸ್‌ನವರ ವರ್ತನೆ ಬಗ್ಗೆ ಜನರಲ್ಲಿ ಭಯ ಭೀತಿ ಉಂಟು ಮಾಡಿದೆ. ಇದರ ಬಗ್ಗೆ ಗೃಹ ಸಚಿವರು ಸೂಕ್ತ ಹೇಳಿಕೆ ನೀಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ತನಿಖೆ ಮಾಡಲು ಆಜ್ಞೆ ಮಾಡಿ ದ್ದೇನೆ. ತಪ್ಪಿತಸ್ಥರು ಯಾರೇ ಇದ್ದರೂ ಕೂಡಾ ಅವರಿಗೆ ಶಿಕ್ಷೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

VIII ಉಳ್ಳಾಲ ಕ್ಷೇತ್ರದ ನಾಟಿಕಲ್ಲು ಮತ್ತು ಅಂಬ್ಲಪೊಗ್ರು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರಿಲ್ಲದಿರುವುದು

ಶ್ರೀ ಬಿ. ಎಸ್. ಇದಿನಬ್ಬ.—ಅಧ್ಯಕ್ಷರೇ, ಮಂಗಳೂರು ತಾಲ್ಲೂಕಿನ ಉಳ್ಳಾಲ ಕ್ಷೇತ್ರದ ನಾಟಿಕಲ್ಲು ಮತ್ತು ಅಂಬ್ಲಪೊಗ್ರು ಪ್ರಾಥಮಿಕ ಆರೋಗ್ಯ ಕೇಂದ್ರದ ಆಸ್ಪತ್ರೆಯಲ್ಲಿ ಡಾಕ್ಟರು ಇಲ್ಲದೇ ಇರುವುದನ್ನು ಕಳೆದ ಒಂದು ವರ್ಷದಿಂದ ಹೇಳುತ್ತಾ ಬಂದಿದ್ದೇವೆ. ಆದರೆ ಈವರೆಗೂ ಅಲ್ಲಿ ಡಾಕ್ಟರ್ ನೇಮಕವಾಗಿಲ್ಲ. ರೋಗಿಗಳು ಬರುತ್ತಾ ಇದ್ದಾರೆ. ಡಾಕ್ಟರರು ಇಲ್ಲ. ಆಸ್ಪತ್ರೆಗಳಲ್ಲಿ ಡಾಕ್ಟರರು ಇಲ್ಲದೆ ಇರುವುದರಿಂದ ತುಂಬಾ ತೊಂದರೆಯಾಗಿದೆ. ಆದಕಾರಣ ನಾಟಿಕಲ್ಲು ಮತ್ತು ಅಂಬ್ಲಪೊಗ್ರು ಆಸ್ಪತ್ರೆಗಳಿಗೆ ಕೂಡಲೇ ಡಾಕ್ಟರರ ನೇಮಕ ಮಾಡಬೇಕು. ಆ ಕುರಿತು ಆರೋಗ್ಯ ಸಚಿವರ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಈ ಬಗ್ಗೆ ಪೂರ್ಣ ತಪಾಸಣೆ ನಡೆಸಿ ಒಂದು ವರದಿಯನ್ನು ಕೊಡುತ್ತೇನೆ.